ಸಂ:ಪೌನಿ:ಇತರೆ:ಸಿಆರ್:423:2011-12

ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು,ದಿನಾಂಕ:21.09.2011

:: ಸುತ್ತೋಲೆ ::

ವಿಷಯ: ಬಾಲ್ಯ ವಿವಾಹ ನಿಷೇಧದ ಬಗ್ಗೆ ಕಡ್ಡಾಯವಾಗಿ ಮದುವೆ ನಡೆಯುವ ಕಲ್ಯಾಣ ಮಂದಿರಗಳಲ್ಲಿ, ದೇವಸ್ಥಾನಗಳಲ್ಲಿ ಮತ್ತು ಮದುವೆ ನಡೆಯುವ ಇತರೆ ಸ್ಥಳಗಳಲ್ಲಿ ಫಲಕಗಳನ್ನು ಪ್ರದರ್ಶಿಸುವ ಕುರಿತು.

ಉಲ್ಲೇಖ: ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರುರವರ ಪತ್ರದ ಸಂಖ್ಯೆ:ಮಮಅ:ಮಕ:20:2010-11 ದಿನಾಂಕ:9.8.2011.

---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಗಳಾದ ಜಸ್ಟೀಸ್ ಡಾ:ಶಿವರಾಜ ವಿ.ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಕೋರ್ ಕಮಿಟಿಯನ್ನು ರಚಿಸಿದ್ದು, ಸದರಿ ಕೋರ್ ಕಮಿಟಿಯು ದಿನಾಂಕ:30.06.2011 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ, ಬಾಲ್ಯ ವಿವಾಹ ನಿಷೇಧದ ಬಗ್ಗೆ ಎಲ್ಲಾ ಕಲ್ಯಾಣ ಮಂದಿರಗಳಲ್ಲಿ, ದೇವಸ್ಥಾನಗಳಲ್ಲಿ ಮತ್ತು ಮದುವೆ ನಡೆಯುವ ಇತರೆ ಸ್ಥಳಗಳಲ್ಲಿ ಕಡ್ಡಾಯವಾಗಿ ಫಲಕಗಳನ್ನು ಪ್ರದರ್ಶಿಸಲು ಶಿಫಾರಸ್ಸು ಮಾಡಿರುತ್ತಾರೆ.

ಆದುದರಿಂದ ತಮ್ಮ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮದುವೆ ನಡೆಯುವ ಕಲ್ಯಾಣ ಮಂದಿರಗಳಲ್ಲಿ, ದೇವಸ್ಥಾನಗಳಲ್ಲಿ ಮತ್ತು ಮದುವೆ ನಡೆಯುವ ಇತರೆ ಸ್ಥಳಗಳಲ್ಲಿ ಫಲಕಗಳನ್ನು ಕಡ್ಡಾಯವಾಗಿ ಪ್ರದರ್ಶಿಸಲು ಸೂಚಿಸಿದೆ.

ಆಯುಕ್ತರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

1. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ ಬೆಂಗಳೂರು.
2. ಎಲ್ಲಾ ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ
3. ಎಲ್ಲಾ ಪೌರಾಯುಕ್ತರು, ನಗರಸಭೆ,
4. ಎಲ್ಲಾ ಮುಖ್ಯಾಧಿಕಾರಿಗಳು, ಪುರಸಭೆ/ ಪಟ್ಟಣ ಪಂಚಾಯಿತಿ

03 OCT 2011

Deputy Commissioner and Chairperson
Unicef Child Protection Project
D C Office Sath Kacheri
RAICHUR-584101. Ph.08532-229011

ಬಾಲ್ಯವಿವಾಹ ನಡೆಯದಂತೆ ತಡೆಯಲು ದೇವಸ್ಥಾನ/ಮಠ/ಕಲ್ಯಾಣ ಮಂಟಪ/ ಫಂಕ್ಷನ್‌ಹಾಲ್‌ಗಳಲ್ಲಿ ಹಾಕಬೇಕಾದ ಶಾಶ್ವತ ಬೋರ್ಡಿನ ವಿಷಯ. (ಈ ಬೋರ್ಡ್‌ನ್ನು ಪೇಯಿಂಟ್‌ನಲ್ಲಿ ಬರೆಸುವುದು/ಪ್ಲೆಕ್ಸಿಗಳಲ್ಲಿ ಹಾಕಬಹುದಾಗಿದೆ)

ಸಾರ್ವಜನಿಕರಿಗೆ ಮಹತ್ವದ ಸೂಚನೆ.

# ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ.

## ಇಲ್ಲಿ ಯಾವುದೇ ಕಾರಣಕ್ಕೂ "18 ವರ್ಷದೊಳಗಿನ ಹೆಣ್ಣು ಮಕ್ಕಳ ಮತ್ತು 21 ವರ್ಷದೊಳಗಿನ ಗಂಡು ಮಕ್ಕಳ ಮದುವೆಗೆ ಅಥವಾ "ಬಾಲ್ಯವಿವಾಹಕ್ಕೆ" ಅವಕಾಶವಿಲ್ಲ, ಕಾನೂನಿನಂತೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ."

- ಬಾಲ್ಯ ವಿವಾಹ ಜಾಮೀನು ರಹಿತ ಹಾಗೂ ವಿಚಾರಣಾರ್ಹ ಅಪರಾಧವಾಗಿರುತ್ತದೆ.
- ಬಾಲ್ಯವಿವಾಹಗಳನ್ನು ನಡೆಸುವುದು ಕಾನೂನು ಬಾಹಿರ.
- ಬಾಲ್ಯವಿವಾಹ ನಿಷೇಧ ಕಾಯ್ದೆ 2006 ರಂತೆ ಶಿಕ್ಷಿಸಲಾಗುತ್ತದೆ.
- 18 ವರ್ಷದೊಳಗಿನ ಬಾಲಕಿಯರು ಮತ್ತು 21 ವರ್ಷದೊಳಗಿನ ಬಾಲಕರ ವಿವಾಹಗಳಿಗೆ ಬೆಂಬಲಿಸುವವರೆಲ್ಲರ ಮೇಲೆ ಮೊಕದ್ದಮೆ ಹೂಡಲಾಗುತ್ತದೆ.
- 2 ವರ್ಷದವರೆಗೆ ಕಠಿಣ ಕಾರಾಗೃಹ ಅಥವಾ ರೂ. 1.00 ಲಕ್ಷದವರೆಗೆ ದಂಡ ಅಥವಾ ಈ ಎರಡನ್ನೂ ವಿಧಿಸಬಹುದಾಗಿರುತ್ತದೆ.

ಮದುವೆಗಿಂತ ಮಕ್ಕಳ ಭವಿಷ್ಯ ಮುಖ್ಯ

ಬಾಲ್ಯ ವಿವಾಹ ನಿಲ್ಲಿಸಿ, ಮಕ್ಕಳ ಹಕ್ಕುಗಳನ್ನು ರಕ್ಷಿಸಿ,

ಎಲ್ಲರೂ ಬನ್ನಿ ಒಂದಾಗಿ, ಬಾಲ್ಯವಿವಾಹ ತಡೆಯಲು ಮುಂದಾಗಿ.

Deputy Commissioner and Chairperson
Unicef Child Protection Project
D. C. Office Sath Kacheri
RAICHUR 584101 Ph.08532-229011

—ವ್ಯವಸ್ಥಾಪಕರು